Sri B. D. JATTI.—I have not studied this business of studying minds (*Laughter*).

Sri J. B. MALLARADHYA.—Was Sri L. S. Venkaji Rao briefed by Government ?

Mr. SPEAKER.—Order, order.

Sri G. VENKATAI GOWDA.—Did this community give any memorandum that their community is not adequately represented ?

Sri B. D. JATTI.—The percentage is based on certain figures given in the last Census Report.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹುದ್ದೆಗಳಿಗೆ ನೇಮಕ ಮಾಡುವಾಗ ಮುಸ್ಲಿಮರಿಗೆ ಪ್ರಪೋರ್ಷನ್ ಏನೂ ಗೊತ್ತುಮಾಡಿಲ್ಲವೆಂದು ಹೇಳಿದರು. ಅದಿಲ್ಲವೆ ಹೇಗೆ ನೇಮಕಮಾಡುವುದು ?

ಶ್ರೀ ಬಿ. ಡಿ. ಜತ್ತಿ.—ಪರಿಸ್ಥಿತಿನೋಡಿ ಒಮ್ಮೊಮ್ಮೆ ಹೆಚ್ಚುಕಡಿಮೆ ಮಾಡಬೇಕಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಯೋಗ್ಯತೆಯನ್ನು ವಿಚಕ್ಷಣೆಯಿಂದ ನೋಡಬೇಕಲ್ಲವೆ ?

ಶ್ರೀ ಬಿ. ಡಿ. ಜತ್ತಿ.—ನಮ್ಮಹತ್ತಿರ ಇದ್ದಷ್ಟು ವಿಚಕ್ಷಣೆಯಿಂದ ನೋಡಬೇಕು.

Sri D. ABDUL RASHEED.—Is the Government aware that the representation given to this community is less ?

Sri B. D. JATTI.—The figures have been worked on a certain basis. If there is any mistake, it may be pointed out and we are prepared to correct ourselves.

Sri J. B. MALLARADHYA.—There is a difference in the percentages of reservations for educational institutions and the services. May I know how this difference is to be accounted for ?

Sri ANNA RAO GANAMUKHI.—The total percentage of reservations for the backward classes for the educational institutions and for services is different. Hence this difference in representation for this community arises.

Sri F. X. DENIS PINTO.—Is the difference accounted for by this fact that the population of Muslims varies in the old Mysore and Karnatak areas ?

Sri B. D. JATTI.—That is not correct. The percentage of merit is to be deducted and therefore there is some difference in the representation given to the services and for colleges.

Sri L. S. VENKAJI RAO.—May I understand that so far as admission to the educational institutions is concerned, it is based upon the literacy in the community and the percentage of reservation to services is based upon the population of the community ?

Sri ANNA RAO GANAMUKHI.—Certainly. The population of the community is taken into account and the percentage fixed.

Member's representations

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಸ್ವಾಮಿ, ನಾವು ಮಾಡಿರುವ ರೂಲ್ಸ್ ನಾವು ಒಪ್ಪಿದ್ದೇವೆ. ಅದರ ಪ್ರಕಾರ ಪ್ರತಿಯೊಬ್ಬ ಶಾಸನ ಸಭಾ ಸದಸ್ಯರೂ ತಮ್ಮ ಕ್ಷೇತ್ರದ ಕಷ್ಟ ಸುಖಗಳನ್ನು ಸರ್ಕಾರದ ಗಮನಕ್ಕೆ ತರಲು ಹತ್ತು ಪ್ರಶ್ನೆಗಳನ್ನು ಕಳುಹಿಸಬೇಕೆಂದು ನಿಗದಿಮಾಡಿದ್ದೀರಿ. ಹಿಂದೆ 50-60 ಪ್ರಶ್ನೆಗಳನ್ನು ಕಳುಹಿಸಲು ಅವಕಾಶವಿತ್ತು. ಆದರೆ ಅದರಿಂದ ಸಾಕಷ್ಟು ಪ್ರಯೋಜನವಾಗುತ್ತಿಲ್ಲವೆಂದು ಹತ್ತಕ್ಕೆ ಆ ಸಂಖ್ಯೆಯನ್ನು ಇಳಿಸಿದರೂ ಉತ್ತರಗಳು ಜಾಗ್ರತೆ ಸಕಾಲದಲ್ಲಿ ಬಾರದೆ ಇದ್ದರೆ ಉದ್ದೇಶ ನೆರವೇರುವುದಿಲ್ಲ. ಈ ಸಭೆ ಮುಗಿಯುವುದರೊಳಗೆ ಸರ್ಕಾರ ಜವಾಬು ಕೊಟ್ಟೇ ತೀರಬೇಕು. ಈಗ ನಾವು ನಮ್ಮನ್ನು ಕುಳಿತುಕೊಳ್ಳಿ ಎಂದು ಆಗಾಗ್ಗೆ ಹೇಳುತ್ತೀರಿ. ಅದರಂತೆ ಕುಳಿತುಕೊಳ್ಳದಿದ್ದರೆ ಕ್ರಮ ತೆಗೆದುಕೊಳ್ಳುತ್ತೀರಿ. ಅಧ್ಯಕ್ಷರ ಮಾತನ್ನು ಗೌರವದಿಂದ ಕೇಳಲೇಬೇಕಾಗುತ್ತದೆ. ಸರ್ಕಾರದವರು ಜಾಗ್ರತೆ ಸಕಾಲದಲ್ಲಿ ಉತ್ತರ ಕೊಡದೆ ಹೋದರೆ ಆ ವಿಚಾರದಲ್ಲಿ ಸೂಕ್ತಕ್ರಮ ತೆಗೆದುಕೊಳ್ಳಲು ರೂಲ್ಸ್ ಪ್ರಕಾರ ಅವಕಾಶವಿದೆಯೆ ? ಇದು ಮೊದಲನೆಯ ವಿಷಯ.

ಎರಡನೆಯದು, ಈಗ ನಾವು ಕಳುಹಿಸುವ ಪ್ರಶ್ನೆಗಳಿಗೆ ಅನೇಕ ದಿವಸಗಳಿಂದ ಸಕಾಲದಲ್ಲಿ ಜಾಗ್ರತೆ ಉತ್ತರ ಬಾರದಿರಲು ಕಾರಣವೇನೆಂಬುದು. ಆಡಳಿತದ ದುರ್ಬಲತೆಯಿಂದಲೋ ಅಥವಾ ದಕ್ಷತೆಯ ಅಭಾವದಿಂದಲೋ ಅಥವಾ ಮತ್ಸ್ಯಾವ ಕಾರಣದಿಂದಲೋ ಹೀಗಾಗುತ್ತಿದೆ. ಇದು ಅರ್ಥವಾಗುತ್ತಿಲ್ಲ. ಈ ಲೋಪದ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ! ಈ ಸಭೆ ಮುಗಿಯುವುದರೊಳಗಾಗಿ ಬೇಗ ನಮ್ಮ ಪ್ರಶ್ನೆಗಳಿಗೆ ಉತ್ತರ ಬಾರದಿದ್ದರೆ ಈ ಸಭೆಯ ಹಕ್ಕು ಬಾಧ್ಯತೆಗಳಿಗೆ ಕುಂದುಕ ಬಂದಂತಾಗುತ್ತದೆ. ಆದ್ದರಿಂದ ಈ ವಿಚಾರದ ಲೈನು ಮಾಡುತ್ತೀರೆಂಬುದನ್ನು ತಿಳಿಸಬೇಕು.

ಶ್ರೀ ಜಿ. ಎಸ್. ಪುಟ್ಟಣ್ಣ (ತುಮಕೂರು).—ನಾನು ಜುಲೈ ಹತ್ತರಲ್ಲಿ ಹತ್ತು ಪ್ರಶ್ನೆ ಕಳುಹಿಸಿದೆ. ಅವಕ್ಕೆ ಸಂಬಂಧಪಟ್ಟ ಆಫೀಸರುಗಳಿಂದ ಜವಾಬು ಬಂದು ಅನೇಕ ದಿವಸಗಳಾಗಿವೆಯೆಂದು ನನಗೆ ಪ್ರೈವೇಟ್ ಇಂಫರ್ಮೇಷನ್ ದೊರೆತಿದೆ. ನಿನ್ನೆ ಮುಖ್ಯಮಂತ್ರಿಗಳು ಸೆಕ್ರೆಟೇರಿಯಟ್ ಕೆಲಸ ಬಹಳ ದಕ್ಷತೆಯಿಂದ ನಡೆಯುತ್ತಿದೆಯೆಂದು ಹೇಳಿದರು, ಸಂತೋಷ. ಆ ರೀತಿ ಇಲ್ಲಿ, ಈ ಸಭೆಯಲ್ಲಿ ಹೇಳುತ್ತಿರುವುದರಿಂದ ಇಲಾಖೆಗಳಲ್ಲಿ ನಿದ್ದೆ ಮಾಡುವವರಿಗೆ ಹಾಸಿಗೆ ಹಾಕಿ ಕೊಟ್ಟ ಹಾಗಾಗುತ್ತದೆ. ನಾವು ಪ್ರಶ್ನೆ ಕಳುಹಿಸಿದ ಮೇಲೆ ಉತ್ತರ ಬಂದು 15-20 ದಿವಸಗಳಾದರೂ ಅವನ್ನು ನಮಗೆ ಒದಗಿಸದಿದ್ದರೆ ಅದರಿಂದ ಪ್ರಯೋಜನವೇನು ? ನಿಧಾನಕ್ಕೆ ಕಾರಣವೇನು ! ಸೆಕ್ರೆಟೇರಿ

(ಶ್ರೀ ಜಿ. ಎನ್. ಪುಟ್ಟಣ್ಣ)

ಯಟ್ ತಾನು ಪಡೆದ ಉತ್ತರಗಳನ್ನು ಜಾಗ್ರತೆ ಓದಿಗಿನಬೇಕಾದದ್ದು ಅದರ ಕರ್ತವ್ಯವಲ್ಲವೆ? ಶ್ರೀ ರುದ್ರಪ್ಪನವರು ಹೇಳಿದ ಹಾಗೆ ಜಾಗ್ರತೆ ಉತ್ತರ ಓದಿಗಿನಿದ್ದರೆ ಸಾಕಷ್ಟು ಪ್ರಯೋಜನವಾಗುವುದಿಲ್ಲ, ನುಮ್ಮನೆ ನಾವು ಇಲ್ಲಿ ಬಂದು ಶಂಖ ಹೊಡೆದು ಕೊಂಡು ಹೋಗಬೇಕಾಗುತ್ತದೆ. ಆದುದರಿಂದ ದಯೆಯಿಟ್ಟು ಈ ಲೋಪವನ್ನು ಹೋಗಾಡಿಸಲು ತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎ. ಆರ್. ಪಂಚಗಾವಿ (ಗೋಕಾಕ್ II).— On a point of order, Sir. "ಶಂಖ ಹೊಡೆಯುವುದು" ಎಂಬ ಶಬ್ದಗಳು ಪಾರ್ಲಮೆಂಟರಿಯೆ?

ಅಧ್ಯಕ್ಷರು.—ಅದನ್ನು ಕೆಟ್ಟ ಅರ್ಥದಲ್ಲಿ ಉಪಯೋಗಿಸುವುದು ಸರಿಯಲ್ಲ. ಆದರೆ ಇಲ್ಲಿ ಆ ರೀತಿ ಅರ್ಥವೇನೂ ನನಗೆ ಅಗಲಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ —ಸಬಾರ್ಡಿನೇಟ್ಸ್‌ಗೆ ಉತ್ತೇಜನ ಕೊಡಲು ಮುಖ್ಯ ಮಂತ್ರಿಗಳು ಕೆಲವು ಮಾತುಗಳನ್ನಾಡಿರಬಹುದು, ಚಿಂತೆಯಿಲ್ಲ. ಈಗ ಎಲ್ಲರೂ ಉತ್ತರಗಳು ನಿಧಾನವಾಗಿ ಬರುತ್ತಿರುವುದನ್ನು ಗಮನಿಸಿ ಸಬಾರ್ಡಿನೇಟ್ಸ್‌ನ್ನು ಕರೆಸಿಕೇಳಿ ಅವರನ್ನು ಪುಲಪ್‌ಮಾಡಿ ಶೀಘ್ರವಾಗಿ ನಕಾಲದಲ್ಲಿ ಉತ್ತರಗಳನ್ನೊದಗಿಸುವಂತೆ ಏರ್ಪಾಡು ಮಾಡಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೆ ಮತ್ತು ಉತ್ತರಗಳಿಗೆ ಸಂಬಂಧಪಟ್ಟ ವಿಷಯದ ಬಗ್ಗೆ ಏನಾದರೂ ಹೇಳುವ ದಿದ್ದರೆ ಮಾನ್ಯ ಸದಸ್ಯರು ಮಾತನಾಡಬಹುದು.

ಶ್ರೀ ಬಿ. ಕೆ. ನಾಗೂರ್ (ವಿಜಾಪುರ).—ಅದನ್ನೇ ಹೇಳುತ್ತೇನೆ ಸ್ವಾಮಿ. ನಮ್ಮ ಪ್ರಶ್ನೆಗಳಿಗೆ ತೀಪ್ರವಾಗಿ ಉತ್ತರ ದೊರೆಯಬೇಕಾದರೆ ನಾವು ಯಾವ ರೀತಿಯಾಗಿ ಮಾತನಾಡಬೇಕು, ಪ್ರಶ್ನೆಗಳನ್ನು ಕೇಳಬೇಕು ಎನ್ನುವುದನ್ನು ದಯವಿಟ್ಟು ಹೇಳಬೇಕೆಂದು ಮಾ. ಮು. ಅವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಒಬ್ಬ ಸದಸ್ಯರು.—ಮಾ. ಮು. ಅಂದರೇನು?

ಶ್ರೀ ಬಿ. ಕೆ. ನಾಗೂರ್.—ಮಾ. ಮು. ಅಂದರೆ ಮಾನ್ಯ ಮುಖ್ಯ ಮಂತ್ರಿಗಳು. (ನಗು)

ಅಧ್ಯಕ್ಷರು.—Order, order. ಮಾನ್ಯ ಸದಸ್ಯರು ಮಾ. ಮು. ಅನ್ನಬಾರದು. ಮಾನ್ಯ ಮುಖ್ಯ ಮಂತ್ರಿಗಳು ಎಂದು ಹೇಳಬೇಕು.

ಶ್ರೀ ಜೆ. ಬಿ. ಮುರ್ತ್ಯಾರಾಧ್ಯ (ನಂಜನಗೂಡು).—ಇಂಗ್ಲೀಷ್‌ನಲ್ಲಿ C. M. ಎಂದು ಹೇಳಬಹುದು. ಹಾಗೆಯೇ ಕನ್ನಡದಲ್ಲಿಯೂ ಹೇಳುವುದು ಚೆನ್ನಾಗಿರುತ್ತದಲ್ಲವೇ?

ಅಧ್ಯಕ್ಷರು.—ಮಾ. ಮು. ಇದರ ಅರ್ಥ ಶ್ರೀ ಮುರ್ತ್ಯಾರಾಧ್ಯರವರಿಗೆ ಗೊತ್ತಿಲ್ಲ ಎಂದು ಕಾಣುತ್ತದೆ. ಹಾಗೆ ಹೇಳುವುದು ಚೆನ್ನಾಗಿರುವುದಿಲ್ಲ.

ಶ್ರೀ ಬಿ. ಡಿ. ಜತ್ತಿ (ಮುಖ್ಯ ಮಂತ್ರಿಗಳು).—ಇದೀಗ ಇಬ್ಬರು ಮಾನ್ಯ ಸದಸ್ಯರು ಪ್ರಶ್ನೆಗಳಿಗೆ ಸರಿಯಾದ ವೇಳೆಯಲ್ಲಿ ತಕ್ಕ ಉತ್ತರಗಳು ಸರಕಾರದಿಂದ ಬರುವುದಿಲ್ಲ ಎಂದು ಹೇಳಿದರು. ಉತ್ತರಗಳು ಬರುವುದಕ್ಕೆ ಸ್ವಲ್ಪ ತಡವಾಗಿರಬಹುದು. ಯಾವ ರೀತಿಯಾಗಿಯೂ ತಡವಾಗಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಇನ್ನು ಮುಂದೆ ತಡಮಾಡಗೊಡುವುದಿಲ್ಲ ಎಂದು ನಾನು ಹೇಳುತ್ತೇನೆ. ಸೆಕ್ರೆಟೇರಿಯಟ್‌ನಲ್ಲಿ ನೌಕರರು ಚೆನ್ನಾಗಿ ಕೆಲಸ ಮಾಡುತ್ತಾರೆಂದು ನಾನು ಹೇಳಿದ್ದು ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರಿಗೆ ಅದೇಕೋ ಅಷ್ಟು ಹಿಡಿಸಲಿಲ್ಲ. ಯಾಕೆ ಎಂಬುದು ನನಗೆ ಗೊತ್ತಿಲ್ಲ. ಆದರೆ ನನ್ನ ಅನುಭವಕ್ಕೆ ಬಂದುದನ್ನು ನಾನು ಹೇಳಿದೆ. ಎಲ್ಲರೂ ಕೆಟ್ಟು ಇದ್ದಾರೆಂದು ಅಂದರೆ ಅವರಿಗೆ ಸಂತೋಷವಾಗುವುದೋ ಏನೋ? ಈಗ ಅವರು ಸರ್ವಿಸ್‌ನಲ್ಲಿ ಇಲ್ಲ. ಆದ್ದರಿಂದ ಇದರ ಉಪಯೋಗ ಅವರಿಗಿಲ್ಲ. ಎಲ್ಲ ಪ್ರಶ್ನೆಗಳಿಗೂ 15 ದಿವಸಗಳೊಳಗಾಗಿ ಉತ್ತರ ಕಳಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಕೆಲವು ಪ್ರಶ್ನೆಗಳಲ್ಲಿ ಹೆಚ್ಚಾಗಿ ವಿವರಗಳು ಬೇಕಾಗುವುದರಿಂದ ಸ್ವಲ್ಪ ತಡವಾಗುತ್ತದೆ. ನಾಲ್ಕಾರು ದಿವಸ ಹೆಚ್ಚು ಅವಧಿ ಕೇಳಬೇಕಾಗುತ್ತದೆ. ಇದನ್ನು ಒಪ್ಪುವುದಾದರೆ ಎಲ್ಲ ವಿವರಗಳನ್ನು ಓದಗಿಸಿಕೊಡುತ್ತೇವೆ. ಆದಷ್ಟು ಜಾಗ್ರತೆ ಉತ್ತರ ಕಳಿಸಿಕೊಡುವುದಕ್ಕೆ ಸಾಧ್ಯವಿರುವ ಎಲ್ಲ ಪ್ರಯತ್ನವನ್ನೂ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—L.S.G. ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಗಳು P. W. D. ಇಲಾಖೆಗೆ ಕಳಿಸಲ್ಪಟ್ಟಿವೆ. ಹೀಗಾದರೆ ಉತ್ತರ ಬರುವುದು ಹೇಗೆ?

ಶ್ರೀ ಕುಂದೂರು ರುದ್ರಪ್ಪ.—ಸಮಾಧಾನಕರವಾದ ಉತ್ತರವನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಡಲಿಲ್ಲ. ನಮ್ಮ ಪ್ರಶ್ನೆಗಳಿಗೆ ಸರಕಾರದಿಂದ ಉತ್ತರಗಳನ್ನು ಪಡೆಯಬೇಕೆಂಬ ನಮ್ಮ ಆಶೆ ಈಡೇರಿಸಲು ಸರಕಾರಕ್ಕೆ ಸಾಧ್ಯವಿದೆಯೇ? ನಮ್ಮ ಪ್ರಶ್ನೆಗಳಿಗೆ ಜಾಗ್ರತೆ ಉತ್ತರ ಕೊಡುವುದಕ್ಕೆ ಸರಕಾರಕ್ಕೆ ಸಾಧ್ಯವಾಗುವುದಿಲ್ಲವೇ?

Sri B. D. JATTI.—Is it proper for the Hon'ble Member to threaten like that in the Assembly? I do not understand. He must have some responsibility.

ಅಧ್ಯಕ್ಷರು.—ಅವರು ಮಾತನಾಡುವ ರೀತಿಯೇ ಹಾಗೆ ಇರುತ್ತದೆ. ಅದನ್ನು ಅವರು threaten ಮಾಡಿದರು ಎಂದೇನೂ ತಿಳಿದುಕೊಳ್ಳಬಾರದು. ಈಗ ಸರಕಾರದ ಪರವಾಗಿ ಅವರು ಉತ್ತರ ಹೇಳಿದ್ದಾರೆ. ಅದೇನೆಂದರೆ ಪ್ರಶ್ನೆಗಳಿಗೆ ಸರಿಯಾದ ಕಾಲದಲ್ಲಿ ಜಾಗ್ರತೆ ಉತ್ತರಗಳನ್ನು ಕಳಿಸುತ್ತೇವೆಂದು ಅವರು ಹೇಳಿದ್ದಾರೆ. ಈ ವಿಚಾರದಲ್ಲಿ ಸ್ವಲ್ಪ ತಡವಾಗಿರಬಹುದು. ಇನ್ನು ಮುಂದೆ ತಡವಾಗುವುದಿಲ್ಲ. ಯಾಕೆಂದರೆ ಎರಡು ಮೂರು ದಿವಸದ ನನ್ನ ಅನುಭವ ಹಾಗೆ ಇದೆ. ಮಾನ್ಯ ಸದಸ್ಯರು ಏನು ಹೇಳಬೇಕೆಂದಿದ್ದರೋ ಆ ವಿಷಯದ ಕಡೆಗೆ ಸರಕಾರದ ಗಮನವನ್ನು ಸೆಳೆದಿದ್ದಾರೆ. ಸರಕಾರದವರಿಗೂ ತಿಳಿದಿದೆ. ಯಾವುದೇ ಮಾನ್ಯ ಸದಸ್ಯರು ಮಾತನಾಡುವಾಗ್ಗೆ ಬಹಳ ಎಚ್ಚರಿಕೆಯಿಂದ ಮಾತನಾಡಬೇಕು. ಸರಕಾರವನ್ನು ಹೆದರಿಸುವ ರೀತಿಯಲ್ಲಿ ಮಾತನಾಡಬಾರದು. ಮಾನ್ಯ ಸದಸ್ಯರುಗಳು ಈ ನಭೆಗೆ ಸರಕಾರವನ್ನು ಹೆದರಿಸಲು ಬಂದಿಲ್ಲ. ರೂಲ್ಸ್ ಪ್ರಕಾರ ಸರಕಾರದ ಕೆಲಸಕಾರ್ಯಗಳು ನಡೆದುಕೊಂಡು ಹೋಗುತ್ತವೋ ಇಲ್ಲವೋ ಎನ್ನುವುದನ್ನು ನೋಡಬೇಕು. ಒಂದು ವೇಳೆ ಹಾಗೇನಾದರೂ ಆಗಿಲ್ಲವೆಂದು ಕಂಡು ಬಂದರೆ ರೂಲ್ಸ್ ಪ್ರಕಾರ ಸರಕಾರ ನಡೆಸಲು ಎಂದು ಹೇಳೋಣ. ಆದರೆ ಸರಕಾರದವರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆ. ಅದಕ್ಕೇನೂ ತೊಂದರೆ ಪಡುವ ಕಾರಣವಿಲ್ಲ. ಸರಕಾರದವರು ಈ ವಿಷಯದಲ್ಲಿ ಸರಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ನಾನು ಹೇಳುತ್ತೇನೆ. ಪ್ರಶ್ನೆಗಳಿಗೆ ಉತ್ತರಗಳು ಸರಿಯಾಗಿ

ಬರುತ್ತಾ ಇವೆ ಎನ್ನುವುದು ನನಗೆ ಗೊತ್ತಿದೆ. ನಾಳೆಯಿಂದ ಪ್ರಶ್ನೆಗಳಿಗೆ ಉತ್ತರಗಳು ಸರಿಯಾಗಿ ಬರುತ್ತವೆ ಎಂದು ನಾನು ಹೇಳುತ್ತೇನೆ.

ಶ್ರೀ ಡಿ. ಟಿ. ಸೀತಾರಾಮರಾವ್ (ಧಡ್ಯಾವತಿ).—ಈಗಿನ ಅಸೆಂಬ್ಲಿ ಅಧಿವೇಶನವನ್ನು ಎರಡು ದಿವಸ ಮುಂದುವರಿಸುತ್ತೀರಾ ಅಥವಾ ಇಲ್ಲವೋ ಎನ್ನುವದನ್ನು ತಿಳಿಸುತ್ತೀರಾ ?

ಅಧ್ಯಕ್ಷರು.—ಈಗ ಆ ಪ್ರಶ್ನೆ ಇಲ್ಲಿ ಬರುವುದಿಲ್ಲ. ಅದಕ್ಕೆ ಉತ್ತರ ಕೊಡುವದು ಸಾಧ್ಯವಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ,

.....

ಅಧ್ಯಕ್ಷರು.—ಪ್ರಶ್ನೆಗಳಿಗೆ ಸರಕಾರದಿಂದ ಉತ್ತರ ಪಡೆಯುವ ಬಗ್ಗೆ ಮಾನ್ಯ ಸದಸ್ಯರುಗಳಲ್ಲಿ ಸ್ವಲ್ಪ ಕಳವಳವುಂಟಾಗಿದೆ. ಉತ್ತರ ದೊರೆಯಲು ತಡವಾಗಿದೆ ಎಂಬುದು ತಪ್ಪು. ಅದನ್ನು ನಾನು ತೋರಿಸಿಕೊಡುತ್ತೇನೆ. ಇಂದಿನ ದಿವಸದವರೆಗೆ ಅಂದರೆ ತಾರೀಖು 4ನೆಯ ಆಗಸ್ಟು 1959ರವರೆಗೆ ಸರಕಾರದಿಂದ 89 ಪ್ರಶ್ನೆಗಳಿಗೆ ಉತ್ತರ ಬರುವ ನಿರೀಕ್ಷೆಯಿದೆ. ಸರಕಾರದಿಂದ ಈಗಾಗಲೇ 76 ಪ್ರಶ್ನೆಗಳಿಗೆ ಉತ್ತರಗಳು ಬಂದಿವೆ. ಇದರ ವಿವರ ಹೀಗೆ ಇದೆ:—

Number of questions tabled ...	406
Number of questions admitted and sent to Government.	269
Number of replies received ...	76
Number of questions answered ...	53
Number of questions included in the Sixth List.	20
Number of replies on hand ...	3
Number of replies due as on 4th August 1959.	89

MYSORE LAND REFORMS BILL, 1958.

Motion to consider (contd.).

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ, ಈಗ ನಾವು ಯಾವ ಭೂಸುಧಾರಣೆಯ ಮಸೂದೆಯನ್ನು ಚರ್ಚೆ ಮಾಡುತ್ತಿದ್ದೇವೆಯೋ ಅದರಮೇಲೆ ನನ್ನೆ ಮತ್ತು ಇಂದು ಸಹ ನನಗೆ ಮಾತನಾಡಲು ಅವಕಾಶ ಸಿಕ್ಕಿದೆ. ಅದಕ್ಕಾಗಿ ನನಗೆ ಆನಂದವಾಗಿದೆ. ಇಂದು ಪ್ರಶ್ನೋತ್ತರಗಳ ಬಗ್ಗೆ ನಡೆದ ಚರ್ಚೆಯಲ್ಲಿ ಚತುರರಾದ ಕತ್ತಿಯವರು ಜಾಣರಾದ ಕಡಿದಾಳ್ ಮಂಜಪ್ಪನವರು ಚಾರಿಪ್ಯಾರೆ, ಬುದ್ಧಿವಂತರಾದ ಕಡಿದಾಳ್ ರವರು ಕುಸಿದಿದ್ದಾರೆ. ಚತುರರಾಗಿದ್ದವರ ಕೈಯಲ್ಲಿ ಈ ಭೂಸುಧಾರಣೆಗೆ ದುರ್ಗತಿ ಯೊದಗಿದೆ. ನಾನೇನೂ ಅವರಷ್ಟು ಬುದ್ಧಿವಂತನಲ್ಲ. ನಾನೊಬ್ಬ ಸರ್ವ ಸಾಮಾನ್ಯ ಮನುಷ್ಯ. ನನ್ನ ಸಾಮರ್ಥ್ಯ ಇದ್ದಷ್ಟು ನಾನು ತಿಳಿದುಕೊಂಡಿದ್ದೇನೆ. ಈ ಭೂಸುಧಾರಣೆಯಿಂದ ದುರ್ಗತಿ ಒದಗುವುದಾದರೆ ಅವರ ಜಾಣತನ ಏನಾಯಿತು ? ನಿನ್ನೆಯದಿವಸ ನಾನು ಮಾಡಿದ ಭಾಷಣದಲ್ಲಿ ಅನೇಕ ವಿಷಯಗಳನ್ನು ಹೇಳಿದ್ದೇನೆ. ಈ ಭೂಸುಧಾರಣೆಯ ಬಗ್ಗೆ ಸರಕಾರದ ಮನೋವೃತ್ತಿ ಏನಿದೆ ಎನ್ನುವದನ್ನು ನಿನ್ನೆ ಹೇಳಿದ್ದೇನೆ. ಈ ಮಸೂದೆಯಲ್ಲಿರುವ ದೋಷಗಳ ಕಡೆಗೆ ಸರಕಾರದವರು ಸ್ವಲ್ಪ ಗಮನ ಕೊಡಬೇಕಾಗಿದೆ.

2-30 P.M.

ಈ ಮಸೂದೆಯಲ್ಲಿ ಎಷ್ಟುಮಟ್ಟಿಗೆ ಭೂ ಹಿಡುವಳಿದಾರನಿಗೆ ಮತ್ತು ಗೇಣೀದಾರನಿಗೆ ಅವರು ನೇಮಕ ಮಾಡತಕ್ಕ ಅಧಿಕಾರಿಗಳು ಮತ್ತು ಅವರು ಹಾಕತಕ್ಕ ಸೀಲಿಂಗ್ ಅವರು ಹೇಳತಕ್ಕ ಸಹಕಾರ ವ್ಯವಸಾಯ ಪದ್ಧತಿ ಇದರಿಂದ ಕಲ್ಯಾಣವಾಗುತ್ತದೆ, ಜನತೆಯನ್ನ ಎಷ್ಟುದೂರ ಕೊಂಡೊಯ್ಯುತ್ತದೆ ಎಂಬ ಎರ್ನಾಲ್ ವಿಷಯಗಳನ್ನೂ ಪರಿಶೀಲನೆ ಮಾಡಿದರೆ ನಿಜವಾಗಿಯೂ ಕೂಡ ಇದನ್ನು ಇಲ್ಲಿ ವಿಮರ್ಶೆ ಮಾಡಬೇಕಾದ ಪ್ರಮೇಯವೇ ಇಲ್ಲ. ಆದರೆ ಸರ್ಕಾರದವರು ಇದರಲ್ಲಿರತಕ್ಕ ದುರುದ್ದೇಶಗಳ ನಿವಾರಣೆಗೆ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸುತ್ತೇವೆ, ಅಲ್ಲಿ ಇದನ್ನು ಪರಿಪೂರ್ಣವಾಗಿ ಅಲ್ಲದೇ ಹೋದರೂ ಎಲ್ಲರಿಗೂ ಸಮಾಧಾನ ಕರವಾದ ರೀತಿಯಲ್ಲಿ ಇದರಲ್ಲಿರತಕ್ಕ ದುರ್ಗುಣಗಳನ್ನು ಕಳೆದುಹಾಕಿ ಎಲ್ಲರೂ ಸರ್ವ ಸಾಮಾನ್ಯವಾಗಿ ಒಪ್ಪುವ ರೀತಿಯಲ್ಲಿ ಈ ಬಿಲ್ಲನ್ನು ತಂದು ಶಾಸನ ಕದತಕ್ಕೆ ಏರಿಸುತ್ತೇವೆ ಎಂದು ಹೇಳುವುದು ಒಂದುದಾರಿ. ಆ ದಾರಿಯಲ್ಲಿ ಹೋಗುವಾಗ ಈ ಲ್ಯಾಂಡ್ ಕಮೀಷನ್ ಎಂದು ಏನು ಹೇಳಿದ್ದಾರೆ ಇದನ್ನು ನೋಡಿ. ಅವರು ಎಷ್ಟುಮಟ್ಟಿಗೆ ಅಧಿಕಾರಕ್ಕೆ ಅಂಟಿಕೊಂಡಿರಬೇಕೆಂದಿದ್ದಾರೆ, ಎಷ್ಟುಮಟ್ಟಿಗೆ ಅಧಿಕಾರವನ್ನು ದುರ್‌ವಿನಿಯೋಗ ಮಾಡಬಹುದು ಎನ್ನುವುದಕ್ಕೆ ಇದೇ ಒಂದು ಸಣ್ಣ ಉದಾಹರಣೆಯನ್ನಾಗಿ ತೋರಿಸುತ್ತಾ ಇದ್ದೇನೆ. ಇವತ್ತು ತಾನೆ ಒಂದು ಪ್ರಶ್ನೆ ಬಂದಾಗ. ಉತ್ತರ ಹೇಳಿದರು. ಕಾಯರ್ ಬೋರ್ಡ್‌ಗೆ ಯಾವ ಆಧಾರದ ಮೇಲೆ ಮೆಂಬರುಗಳನ್ನು ಹಾಕಿದರು ಎಂಬುದು ನಮಗೆ ವಿಷಯ ಎಲ್ಲ ಖಚಿತವಾಗಿ ಗೊತ್ತಾಯಿತು. ಎಷ್ಟುಮಟ್ಟಿಗೆ ಚಾಕಚಕ್ಯತೆ ಇದೆ ಎಂಬುದನ್ನು ಈ ಸಭೆಯಲ್ಲಿ ನಾನು ಒಂದು ವರ್ಷಕಾಲದಿಂದ ತಿಳಿದುಕೊಂಡಿದ್ದೇನೆ. ಹೇಗೆ, ಎಷ್ಟುಮಟ್ಟಿಗೆ ತಮ್ಮವರೇ ಅಧಿಕಾರದಲ್ಲಿರತಕ್ಕ ಒಂದು ಗುಂಪನ್ನು in tact ಆಗಿ ಇಟ್ಟುಕೊಳ್ಳುವುದಕ್ಕೆ ತಮ್ಮ ಗುಂಪಿನವರನ್ನೇ ಕಮಿಟಿಗಳ ಚೇರ್ಮನ್ ಆಗಿ ಮಾಡುತ್ತಾ ಇದ್ದಾರೆ ಎಂಬುದು ಗೊತ್ತಾಗುತ್ತದೆ. ಲ್ಯಾಂಡ್ ಕಮೀಷನ್‌ನಲ್ಲಿ ಇಬ್ಬರು ನಾನ್ ಆಫೀಷಿಯಲ್ಸ್ ಇರುತ್ತಾರೆ. ಅವರಿಗೆ 1200, 1300 ರೂಪಾಯಿ ತಲಬು ಇದೆ. ಇವತ್ತಿನ ದಿನ, ಜತ್ತಿ ಅವರು ಮಹಾಚತುರರು, ಚತುರತೆಯಿಂದ, ಬುದ್ಧಿವಂತಿಕೆಯಿಂದ ವ್ಯವಹಾರ ಮಾಡುತ್ತೇವೆ ಎಂದು ಹೇಳುತ್ತಾರೆ. ಎಲ್ಲ ಜನರಿಗೂ ಸಮಾಧಾನವಾಗುವ ರೀತಿಯಲ್ಲಿ ವ್ಯವಹಾರ ಮಾಡುತ್ತೇವೆ ಎಂದು ಹೇಳುತ್ತಾರೆಯಲ್ಲಾ ಕೇರಳದಲ್ಲಿ ಕಮಿಟಿ ಸದಸ್ಯರಾಗಿದ್ದ 9,000 ಜನರ ಪೈಕಿ 8,750 ಜನಗಳವರೆಗೂ ಕಮ್ಯೂನಿಸ್ಟರೇ ಇದ್ದರು, ಮಿಕ್ಕವರು ಬಾಕಿಯವರಿದ್ದರು ಎಂದು ಹೇಳುವಾಗ ಕಾಂಗ್ರೆಸ್ ತತ್ವ ಹೇಳುವವರು, ಕಾಂಗ್ರೆಸ್ ಸರ್ಕಾರ ನಡೆಸುವವರಾದ ನೀವು ಮಾಡತಕ್ಕ ಕಮಿಟಿಯಲ್ಲಿ ಎಷ್ಟು ಪರ್ಸೆಂಟ್ ಕಾಂಗ್ರೆಸ್‌ನವರಿದ್ದಾರೆ, ಎಷ್ಟು ಪರ್ಸೆಂಟ್ ನಾನ್ ಕಾಂಗ್ರೆಸ್ ನವರಿದ್ದಾರೆ, ಎಷ್ಟು ಪರ್ಸೆಂಟ್ ಕಾಂಗ್ರೆಸ್ ಸಿಂಪಥೈಸರ್ಸ್ ಇದ್ದಾರೆ ಎಂಬುದನ್ನು ಯೋಚನೆ ಮಾಡಿದ್ದೀ ಆದರೆ.....